# ಬ್ರಹ್ಮ ಕಮಲ



ರಾತ್ರಿ ರಾಣಿ ಎಂದು ಪ್ರಸಿದ್ಧವಾಗಿರುವ ಬ್ರಹ್ಮಕಮಲ ವರ್ಷಕೊಮ್ಮೆ ಮಾತ್ರ ಅರಳುತ್ತದೆ. ಡಿ.ಆರ್.ಡಿ. ಒ ವಸತಿ ಸಮುಚ್ಛಯದ ಎಸ್. ಗುರುಸಿದ್ದಪ್ಪ ದಂಪತಿಯ ಮನೆಯಲ್ಲಿನ ಹೂ ಕುಂಡದಲ್ಲಿ ಬ್ರಹ್ಮಕಮಲವನ್ನು ಬೆಳೆಸಲಾಗಿದೆ. ಇದು ಈಚೆಗೆ ಒಂದೇ ಬಾರಿಗೆ 35 ಹೂವು ಬಿಟ್ಟು ಅಚ್ಚರಿ ಮೂಡಿಸಿತು. ಸಮುಚ್ಛಯದ ನಿವಾಸಿಗಳು ಈ ಹೂವುಗಳನ್ನು ಕಂಡು ಪುಳಕಿತರಾದರು. ಮಕ್ಕಳು ಹೂವು ಹಿಡಿದು ಸಂಭ್ರಮಿಸಿದರು. ವೈಜ್ಞಾನಿಕವಾಗಿ ಸೋಸೂರಿಯಾ ಅಬ್ವಲ್ಲಾಟ ಎಂದು ಕರೆಯಿಸಿಕೊಳ್ಳುವ ಬ್ರಹ್ಮ ಕಮಲ ಸೂರ್ಯನ ಬೆಳಕಿನಲ್ಲಿ ಮೊಗ್ಗಾಗಿ ಚಂದ್ರನ ಬೆಳಕಿನಲ್ಲಿ ರಾತ್ರಿ 10ರ ನಂತರ ಅರಳಿ ಬೆಳಕಾಗುವ ಮುಂಚೆ ಬಾಡಿ ಹೋಗುತ್ತದೆ. ಸೃಷ್ಟಿಕರ್ತನಾದ ಬ್ರಹ್ಮನ ಕೈಯಲ್ಲಿರುವುದಲ್ಲಿಂದಲೇನೊ ಇದಕ್ಕೆ ಬ್ರಹ್ಮಕಮಲ ಎಂದು ಹೆಸರು ಬಂದಿದೆ.

—ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

# ಹಲಸು ಅಪ್ಪಿದ ಹನುಮಂತ!



ಏಷ್ಯಾ ಖಂಡದಲ್ಲಿಯೇ ಅತಿ ಎತ್ತರದ ಏಕಶಿಲಾ ಗೊಮ್ಮಟನ ಕಲಾಶಿಲ್ಪವಿರುವ ಶ್ರವಣಬೆಳಗೊಳ ಪ್ರಸಿದ್ಧ ಜೈನ ಪುಣ್ಯಕ್ಷೇತ್ರ. ಬೆಂಗಳೂರಿನಿಂದ 150 ಕಿ.ಮೀಗಳ ದೂರದಲ್ಲಿರುವ ಶ್ರವಣಬೆಳಗೊಳದ ವಿಂಧ್ಯಗಿರಿಯಲ್ಲಿ ಕಡೆಯಲಾಗಿರುವ ಈ ಮೂರ್ತಿಯನ್ನು ಗಂಗರ ಚಾವುಂಡರಾಯನು ನಿರ್ಮಿಸಿದನು. ಗೊಮ್ಮಟನ ದರ್ಶನಕ್ಕೆ ಸುಮಾರು 700 ಮೆಟ್ಟಿಲುಗಳನ್ನು ಹತ್ತಬೇಕಾಗುತ್ತದೆ. ಬಾಹುಬಲಿಯ 58 ಅಡಿ ಎತ್ತರದ ಭವ್ಯವಾದ ವಿಗ್ರಹವನ್ನು 30 ಕಿ. ಮೀ ದೂರದಿಂದಲೇ ಕಾಣಬಹುದು. ಬೆಟ್ಟದ ಮೇಲಿಂದ ಸುಂದರ ಪ್ರಕೃತಿಯ ಹಸಿರ ಸಿರಿ, ಊರ ಸುತ್ತುವರೆದಿರುವ ಬೆಟ್ಟ, ಕಲ್ಯಾಣಿ ದೃಶ್ಯಗಳು ಮೋಹಕವಾಗಿದೆ. ಇಲ್ಲಿನ ಬೆಟ್ಟದ ಮೇಲಿನ ಸ್ತಂಭವೊಂದರ ಮೇಲೆ ನನ್ನನ್ನು ಆಕರ್ಷಿಸಿದ್ದು ಈ ಚಿತ್ರದಲ್ಲಿರುವ ಮಂಗ. ಮಂಗವೊಂದು ಹಲಸಿನ ಹಣ್ಣನ್ನು ಅಪ್ಪಿ ಹಿಡಿದುಕೊಂಡಿರುವ ಸುಂದರ ಕೆತ್ತನೆ ಮನಸೆಳೆಯಿತು.

—ಎಸ್.ಪ್ರಭಾವತಿ, ಬೆಂಗಳೂರು

# ಎಲೆ ಕಬಳಿಸುವ ಹುಳು !



ನಮ್ಮ ಮನೆಯ ಕೈತೋಟದ ನಿಂಬೆ ಮತ್ತು ಕರಿಬೇವಿನ ಗಿಡದ ಎಲೆಗಳು ಚಿಗುರಿ ಸ್ವಲ್ಪ ದೊಡ್ಡವಾಗುವಷ್ಟರಲ್ಲಿ ಮಂಗಮಾಯವಾಗುತ್ತಿದ್ದವು. ರಾತ್ರಿ ಇದ್ದ ಎಲೆಗಳು ಬೆಳಗ್ಗೆ ಇರುತ್ತಿರಲಿಲ್ಲ. ಕೇವಲ ಕಡ್ಡಿಗಳು ಮಾತ್ರ ಉಳಿಯುತ್ತಿದ್ದವು. ಯಾವುದೋ ಹುಳು ಎಲೆಗಳನ್ನು ತಿಂದುಹಾಕುತ್ತಿದೆ, ಅದನ್ನು ಕಂಡುಹಿಡಿಯಲು ನಿರ್ಧರಿಸಿ ಗಿಡವನ್ನೆಲ್ಲ ಹುಡುಕಿದಾಗ ಕಂಡಿದ್ದು ಈ ಹುಳು. ಬಕಾಸುರನಂತೆ ಎಲೆಗಳನ್ನು ಕಬಳಿಸುವ ಇದು ಬೇರೆ ಗಿಡಗಳಿಗೆ ಹೋಗುವುದಿಲ್ಲ. ಈ ಹುಳುವಿಗೆ ಎರಡು ಬದಿಯಲ್ಲೂ ಕಾಲುಗಳಿವೆ. ಕಡು ಹಸಿರು ಬಣ್ಣ. ನೋಡಲು ರೈಲಿನಂತೆ ಕಾಣುತ್ತದೆ! ಕಣ್ಣುಗಳು ಬೆಳಕು ಸೂಸುವಂತೆ ಇವೆ. ಅದನ್ನು ತೆಗೆದು ಬಹು ದೂರ ಎಸೆದು ಬಂದರೂ ಸ್ವಲ್ಪ ದಿನದಲ್ಲೇ ಮತ್ತೆ ಪ್ರತ್ಯಕ್ಷವಾಯಿತು!

—ಬಿ. ಎಸ್. ರಾಜಲಕ್ಷ್ಮಿ, ಹಾಸನ